**ಮೂಲ ದಾವಾ ನಂಃ 108/2019**

**ಡಿ ಡಬ್ಲುಃ 01**

ಸಾಕ್ಷಿಯನ್ನು ದಿನಾಂಕಃ **04-02-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್.ವಿ.ಎ ವಕೀಲರಿಂದಃ**

ನಾನು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

ಕೇವಿಯಟ್ ನೋಟಿಸ್ಸ ಪ್ರತಿಗಳನ್ನು ಕ್ರಮವಾಗಿ ನಿ.ಡಿ 1 ಮತ್ತು ನಿ.ಡಿ 2 ಎಂದು, ಅಂಚೆ ಸ್ವೀಕೃತಿ ಪ್ರತಿಗಳನ್ನು ಕ್ರಮವಾಗಿ ನಿಡಿ.3 ಮತ್ತು ನಿಡಿ.4 ಎಂದು , ಹೊನ್ನಾವರ ಗ್ರಾಮದ ಸರ್ವೇ ನಂಬರ್ 289 ಹಿಸ್ಸಾ 3 ಕ ಪಹಣಿ ಪತ್ರಿಕೆಯನ್ನು ನಿಡಿ.5 ಎಂದು, 9 ಫೋಟೋ ಹಾಗೂ ಒಂದು ಸಿಡಿಯನ್ನು ಕ್ರಮವಾಗಿ ನಿಡಿ.6 ರಿಂದ ನಿಡಿ15 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ.ಆರ್.ಎನ್ ವಕೀಲರಿಂದಃ**

ನನಗೆ ನಾವು ವಾಸವಿರುವ ಸರ್ವೇ ನಂಬರ ಗೊತ್ತಿರುವುದಿಲ್ಲ. ನಾನು ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ನಾನು ನನ್ನ ಸ್ಥಳದ ಸರ್ವೇ ನಂಬರ್ ಪಹಣಿ ಪತ್ರಿಕೆಯನ್ನು ನೋಡಿದ್ದು , ಅದರಲ್ಲಿ ನನ್ನ ಹೆಸರಿದೆ , ಆದರೆ ಸರ್ವೇ ನಂಬರ್ ನೋಡಿದ್ದು ಇರುವುದಿಲ್ಲ. ಸದರಿ ಕ್ಷೇತ್ರವು 2 ಗುಂಟೆ 12 ಆನೆ ಸ್ಥಳವಾಗಿದೆ. ಸದರಿ ಸ್ಥಳವನ್ನು ನಾನು 2007 ನೇ ಸಾಲಿನಲ್ಲಿ ಖರೀದಿಸಿದ್ದೇನೆ. ನಾವು ಸದರಿ ಸ್ಥಳವನ್ನು ಖರೀದಿ ಮಾಡುವ ಪೂರ್ವದಲ್ಲಿ ಸರ್ವೆಯಾಗಿದ್ದು, ಆ ನಂತರ ಸದರಿ ಸ್ಥಳವನ್ನು ಖರೀದಿ ಮಾಡಲಾಗಿದೆ. ಆ ಸಮಯದಲ್ಲಿ ಸದರಿ ಸ್ಥಳಕ್ಕೆ ಗಡಿ ಗುರುತುಗಳನ್ನು ಹಾಕಲಾಗಿದೆ. ನಾವು ಸದರಿ ಗಡಿ ಗುರುತುಗಳ ಅನುಸಾರವಾಗಿ ನಮ್ಮ ಸ್ಥಳದ ಒಂದು ಬದಿಗೆ ಕಂಪೌಂಡ್ ನ್ನು ಹಾಕಿಕೊಳ್ಳಲಾಗಿದೆ. ಸದರಿ ಕಂಪೌಂಡ್ ನ್ನು ಪೂರ್ವ ದಿಕ್ಕಿನ ಕಡೆಗೆ ಹಾಕಲಾಗಿದೆ. ಸದರಿ ಸ್ಥಳದ ಪೂರ್ವ ದಿಕ್ಕಿಗೆ ವಾದಿಯವರ ಸ್ಥಳವಿದೆ. ಪಶ್ಚಿಮ ಬದಿಗೆ ಶೇಟ್‌ರವರ ಮನೆ ಇದೆ. ಉತ್ತರ ದಿಕ್ಕಿಗೆ ನಮ್ಮ ಸಮಾಜದ ಇನ್ನೊಂದು ಮನೆ ಇದೆ. ದಕ್ಷಿಣಕ್ಕೆ ನನ್ನ ತಾಯಿಯ ಮನೆ ಇದೆ. ನಮ್ಮ ಸ್ಥಳಕ್ಕೆ ಬರಲು ಪೂರ್ವ ದಿಕ್ಕಿನಲ್ಲಿ ರಸ್ತೆ ಇದೆ. ಸದರಿ ರಸ್ತೆಯು ಮಸೀದಿಯಿಂದ ಬಂದು ನಮ್ಮ ಮನೆ ಮುಂದೆ ಹಾದು ಹೋಗುತ್ತದೆ. ನಾನು ನ್ಯಾಯಾಲಯದ ಮುಂದೆ ಫೋಟೋಗಳನ್ನು ಹಾಜರುಪಡಿಸಿದ್ದೇನೆ. ನಿಡಿ. 6 ರಲ್ಲಿರುವ ಕಂಪೌಂಡ್ ನ್ನು ನಾನೇ ಹಾಕಿಸಿದ್ದೇನೆ.

ನಾನು ಹೊಸ ಮನೆಯನ್ನು ಕಟ್ಟುವಾಗ ಮುನ್ಸಿಪಾಲ್ಟಿಯಿಂದ ನನ್ನ ಹೆಸರಿಗೆ ಅನುಮತಿಯನ್ನು ಪಡೆದಿದ್ದೆನು. ಸದರಿ ಮನೆಯ ಇನ್ನೊಂದು ಬದಿಗೆ ಅಂದರೆ ಪಶ್ಚಿಮ ಬದಿಗೆ ನಮ್ಮ ಹಳೆಯ ಮನೆ ಇದ್ದು , ಅದು ಈಗಲೂ ಹಾಗೆ ಇದೆ.

ಮುನ್ಸಿಪಾಲ್ಟಿಯಿಂದ ಅನುಮತಿಯನ್ನು ನೀಡುವಾಗ, ಅದರಲ್ಲಿ ಕೆಲವು ಶರತ್ತುಗಳು ಹಾಕಿದ್ದರು ಎಂದರೆ ಸರಿ. ಅದರಲ್ಲಿ ಮುನ್ಸಿಪಾಲ್ಟಿಯವರು ನಮ್ಮ ಜಾಗದ 4 ದಿಕ್ಕುಗಳಲ್ಲಿ ಎಷ್ಟು ಸೆಟಬ್ಯಾಕ್ ಬಿಡಬೇಕೆಂದು ಎಂದು ಹೇಳಿದ್ದು, ಅದರಂತೆ ನಾವು ಸೆಟ್ ಬ್ಯಾಕ್ ನ್ನು ಬಿಟ್ಟು ಮನೆಯ ನ್ನು ಕಟ್ಟಿದ್ದೇವೆ. ಪೂರ್ವ ದಿಕ್ಕಿಗೆ 1 1/2 ಫೂಟ್ ಸೆಟ್ ಬ್ಯಾಕ್ ಬಿಡಬೇಕೆಂದು ಶರತ್ತು ಇತ್ತು. ನಾವು ಮನೆ ಕಟ್ಟಮವಾಗ 1 1/2 ಫೂಟ್ ಸೆಟ ಬ್ಯಾಕ್ ಬಿಟ್ಟು ಅಡಿಪಾಯ ಹಾಕಿದ್ದೇವೆ. ಆದರೆ ಆ ಸಮಯದಲ್ಲಿ ವಾದಿಯು ಮುನ್ಸಿಪಾಲ್ಟಿಗೆ ತಕರಾರನ್ನು ಸಲ್ಲಿಸಿದ್ದರು ಎಂದರೆ ಸರಿ. ಆ ನಂತರ

ಮುನ್ಸಿಪಾಲ್ಟಿಯವರು ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿದ್ದಾರೆ ಎಂದರೆ ಸರಿ. ಮುನ್ಸಿಪಾಲ್ಟಿಯವರು ನಾವು ಅನುಮತಿಯ ಶರತ್ ನ್ನು ಉಲಂಘನೆ ಮಾಡಿದ್ದೇವೆ ಎಂಬುದಾಗಿ ಎರಡು ಬಾರಿ ನೋಟಿಸ್ಸನ್ನು ನೀಡಿದ್ದಾರೆ ಎಂದರೆ ಸರಿ. ಆ ನಂತರ ನಾವು ಸದರಿ ನೋಟಿಸ್ಸನ ಅನುಸಾರವಾಗಿ ನಮ್ಮ ಜಾಗವನ್ನು ಹಿಂದಕ್ಕೆ ತೆಗೆದುಕೊಂಡು ಕಟ್ಟಡ ಕಟ್ಟಲು ಪ್ರಾರಂಭಿಸಿದೇವು. ಸದರಿ ಜಾಗದಲ್ಲಿ ನಾವು ಒಂದೇ ಸ್ಲಾಬಿನ್ ಮನೆಯನ್ನು ಕಟ್ಟಿದ್ದೇವೆ. ನಮ್ಮ ಮನೆಯ ಸಜ್ಜಾ ಕಂಪೌಂಡನಿಂದ 1 1/2 ಫೂಟ್ ದೂರದಲ್ಲಿದೆ.

ಸದರಿ ಕಂಪೌಂಡ್ ನ ಪಕ್ಕದಲ್ಲಿ ವಾದಿಯ ಮನೆ ಇದೆ ಎಂದರೆ ಸರಿ. ನಿಡಿ. 11 ರ ದಾಖಲೆಯನ್ನು ನ್ಯಾಯಾಲಯದ ಮುಂದೆ ನಾನೇ ಹಾಜರುಪಡಿಸಿದ್ದೇನೆ. ನಿಡಿ.11 ರಲ್ಲಿ ಕಾಣುವಂತಹ ಗೋಡೆಯು ನಮ್ಮ ಹಳೆಯ ಮನೆಯ ಗೋಡೆಯಾಗಿರುತ್ತದೆ. ಸದರಿ ನಿಡಿ.11 ರ ದಾಖಲೆಯಲ್ಲಿ ಕಾಣುವ ಗಡಿ ಹಾಗೂ ವಾದಿಯ ಗಡಿಗೆ ಯಾವುದೇ ಸಂಬಂಧವಿಲ್ಲ ಎಂದಾಗ, ಸಾಕ್ಷಿಯು ಇದೆ ಎಂಬುದಾಗಿ ನುಡಿದಿದ್ದಾರೆ. ನಮ್ಮ ಹಳೆಯ
ಮನೆಯ ಗಡಿ ಗುರುತುಗಳು ಹಾಗೂ ವಾದಿಯ ಗಡಿ ಗುರುತುಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ನಮ್ಮ ಹೊಸ ಮನೆಯ ಗಡಿ ಗುರುತುಗಳು ಹಳೆಯ ಮನೆಯವರಗೆ ಇರುತ್ತವೆ ಎಂಬುದಾಗಿ ನುಡಿದಿದ್ದಾರೆ. ನಮ್ಮ ಹೊಸ ಮನೆಯ ಮತ್ತು ಹಳೆ ಮನೆ ನಡುವೆ ಒಂದೇ ಗೋಡೆ ಇರುತ್ತದೆ. ಒಂದು ಬದಿಗೆ ಹಳೆ ಮನೆ ಇನ್ನೊಂದು ಬದಿಗೆ ಹೊಸ ಮನೆ ಬರುತ್ತದೆ. ನಮ್ಮ ಹೊಸ ಮನೆಯು ಪಶ್ಚಿಮ ದಿಕ್ಕಿನ ಕಡೆಗೆ ಬರುತ್ತದೆ , ಹಾಗೂ ಹಳೆ ಮನೆಯು ಪೂರ್ವ ದಿಕ್ಕಿಗೆ ಬರುತ್ತದೆ. ನಮ್ಮ ಸ್ಥಳದ ಪೂರ್ವ ದಿಕ್ಕಿನ ಕಡೆಗೆ ವಾದಿಯ ಮನೆ ಬರುತ್ತದೆ. ನಾವು ವಾದಿಯ ಮನೆಯ ಬದಿಗೆ ಪೂರ್ವ ದಿಕ್ಕಿಗೆ ಹೊಸ ಮನೆ ಕಟ್ಟಿದ್ದು ಇರುವುದಿಲ್ಲ. ನಾವು ಅರ್ಧ ಕಂಪೌಂಡ್ ನ್ನು ಕಟ್ಟಿದ್ದೇವೆ. ನಮ್ಮ ಕಂಪೌಂಡ್ ನ 1 1/2 ಫೂಟ್ ದೂರದಲ್ಲಿ ಹಳೆಯ ಮನೆ ಇದೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.